Regd No BG 155

— ೩೯ —

14—5—1962

Sri "SATYAVADI"
— DAILY —
MYSORE 4
46 th Year

ಸತ್ಯವಾದಿ
SATYAVADI

ಪ ವ ಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
"ಸತ್ಯವಾದಿ" ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

Protect the cow

ಸ್ಥಾಪಕರು— ಆರಮನೆ ಸಿಂಪ್ಲೇದಾರ್ ಎಂ. ಎ. ಸುಬ್ಬರಾಯುರು [ಬಿಡಿ ಪ್ರತಿ 3 ಪೈ

ಗೋಸಂರಕ್ಷಣೆ ಮಾಡಿ

ಲಾಪೋ ರಕ್ಷಣೆಗೆ ಅಮೇರಿಕ ಸಿದ್ಧ

ದೇಶದ ಮೇಲೆ ಕಮ್ಯೂನಿಸ್ಟರು ದಂಡನ್ನು ಸುಗ್ಗಿಸುವದನ್ನು ತಡೆದು ಲಾಪೋಸಿನ ರಕ್ಷಣೆ ಮಾಡಲು ಅಮೆರಿಕದ ಸೇನೆಯನ್ನು ಬದ್ಧವಾಡಲು ಅಧ್ಯಕ್ಷ ಕೆನ್ನೆಡಿ ಸಿದ್ಧವಾಗಿರುವದಾಗಿ ವಾಷಿಂಗ್ಟನ್ ವಾರ್ತೆ ತಿಳಿಸುತ್ತದೆ

ಸಹಾಯಕ್ಕೆ ಅರ್ಜಿಗಳು

ಚಲಚ್ಚಿತ್ರ ಕೈಗಾರಿಕಾ ಸಹಾಯಾರ್ಥಕ್ಕಾಗಿ ರೂ 73-29 ಲಕ್ಷ ರೂ ಗಳ ಕೋಳಿಕಕ್ಕೆ 24 ಅರ್ಜಿಗಳು ಬಂದಿರುವದಾಗಿ ಕಲ್ಕತ್ತಾ ವಾರ್ತೆ.

ಹೈಕೋರ್ಟ್ ತೀರ್ಪು

ಗೂಂಡಾ, ಬದ್ಮಾಷ್ ಹೀನಾ ಮಾನ ಜೈಗಳಗಳಲ್ಲಿ ಹಾನಿಕಂಪಾದ ಪದಗಳಿಲ್ಲವೆಂದು ಅಲಹಾಬಾದು ಹೈ ಕೋರ್ಟು ತೀರ್ಪಿತ್ತಿದೆ.

ಆರೋಗ್ಯಕ್ಕೆ

ಒಳ್ಳೆಯ ಆರೋಗ್ಯಕ್ಕೆ ಶುಚಿತ್ವ, ಪ್ಯಾಯಾಮ, ಸಮತೂಕ ಆಹಾರ ಮುಖ್ಯ ಸರಿಯಾದ ನಿದ್ರೆ ಬೇಕೆಂದು ಜೋನ್ಸ್‌ರವರು ಅಭಿಪ್ರಾಯಪಟ್ಟಿರುವರು.

ರಷ್ಯಪಲ್ಲಿ

ರಷ್ಯದಲ್ಲಿ ಒಂದಾದರೂ ಗಾಲ್ಫ್ ಆಟದ ಮೈದಾನ ಇಲ್ಲವೆಂದು ಪ್ರಕಟವಾಗಿದೆ.

ಹಿರ್ಷಸ ಮರಣ

ಪೋಲಂದಾಗೆ 17 ಮೈಲಿಗಳ ದೂರದ ಹಾಥಿಖಾನೆ ಗ್ರಾಮದಲ್ಲಿ ಎರಡು ಗುಂಪುಗಳಲ್ಲಿ ಹೊಡೆದಾಟವಾಗಿ ಹಿರ್ಷ ಪುರಾಣಹೊಂದಿದ 6 ಜನರು ಗಾಯಗೊಂಡಿರು

ವಿವಾಹಗಳು

ಹೊಸ್ನೆ ಅಹಮದಾಬಾದಿನಲ್ಲಿ ವಿವಾಹದ ದಿನ. 1600 ಮದುವೆಗಳು ಆದುವು. ವಿಪರೀತ ವಿವಾಹ ಸತ್ಕಾರಗಳ ಕಾರಣ ಕಾರ್ಡ್ ಟೇಬಲುಗಳ ಅಭಾವವು ಹೆಚ್ಚಾಗಿತು ಅನೇಕ ವಿವಾಹಗಳು ಪುರೋಹಿತರ ಆಶೀರ್ವಚನವಿಲ್ಲದೆ ನಡೆದವು. ಈ ಎಲ್ಲ ವಿವಾಹಗಳಿಗೆ ಆಗಿರುವ ಒಟ್ಟು ವೆಚ್ಚ ರೂ. 1 ಕೋಟಿ.

ಬಂಧನ

ಬೊಂಬಾಯಿ ರೇವಿನಲ್ಲಿ ವಿದೇಶಿ ಬಂದಿಳಿದ ಒಬ್ಬ ಪ್ರಯಾಣೀಕನ ಬಿಸ್ಕತ್ತು ಟಿನ್ನನ್ನು ಸುಂಕದವರು ಶೋಧಿಸಲು ಅದರಲ್ಲಿ 150 ತೋಲಾ ಬಂಗಾರ ಹಾಗೂ ಕೈಗಡಿಯಾರಗಳು ದೊರೆತವು ಆತನು ಬಂಧಿತನಾಗಿದ್ದಾನೆ.

ಐವರ ಮರಣ

ಇಂಫಾಲಿನಿಂದ ಬಂದಿರುವ ವಂದಿ ಪ್ರಕಾರ ಅಸ್ಸಾಂ ರೈಫಲು ಪಾರ್ಟಿಯು 5 ಮಂದಿ ಶತ್ರು ನಾಗಾಗಳ ಗುಂಡಿನೇಟಿನಿಂದ ಮರಣಹೊಂದಿದರು.

2 ವರೆ ಗಂಟೆ ಕೆಲಸ

ಸರ್ಕಾರಿ ನೌಕರನು ದಿನವೊಂದಕ್ಕೆ ಎಂಟೂವರೆ ಗಂಟೆಗಳ ಕಾಲ ಕೆಲಸ ಮಾಡುವನೆಂದು ರಕ್ಷಣಾ ಮಂತ್ರಿ ಶ್ರೀ ವಿ ಕೆ ಕೃಷ್ಣಮೆನನ್ ನಿನ್ನೆ ಬೊಂಬಾಯಿನಲ್ಲಿ ತಿಳಿಸಿದರು

× ಭಾರತದ ಚಲನಚಿತ್ರದ ನಟ ಶಿವಾಜಿ ಗಣೇಶನ್, ತಾನು ಕಳೆದ ವಾರ 2 ದಿನಗಳ ಪರಿಗೆ ಇದ್ದ ನ್ಯೂಮೆಕ್ಸಿಕೋದ ಆಲ್ಬುಕರ್ಕನ ಮಕ್ಕಳಿಗೆ ಒಂದು ಆನೆಯನ್ನು ಕೊಡುಗೆಯಾಗಿ ಕೊಡಲು ತಿಳಿಸಿದರು.

ಪಾಟ್ನಾಕ್ಕೆ ಪ್ರಸಾದ್

ನಿನ್ನೆ ಸಂಜೆ ವಿಶೇಷ ರೈಲಿನಲ್ಲಿ ಪಾಟ್ನಾಕ್ಕೆ ಡಾ|| ರಾಜೇಂದ್ರ ಪ್ರಸಾದರು ನವ ದೆಹಲಿಯಿಂದ ಹೊರಟಾಗ ಅವರಿಗೆ ಪ್ರೀತಿಯುತ ಬೀಳ್ಕೊಡುಗೆಯನ್ನು ಅಧಿಕ ಸಂಖ್ಯೆಯಲ್ಲಿ ಸೇರಿದ್ದ ಜನತೆ ಇತ್ತಿತು. ರಾಜತಾಂತ್ರಿಕ ಪ್ರತಿನಿಧಿಗಳು ಮಂತ್ರಿಗಳು, ಸಾಧುಗಳು ಮುಂತಾದವರು ಅವರನ್ನು ಬೀಳ್ಕೊಟ್ಟರು. ಸಂಜೆ 7 ವರೆ ಗಂಟೆಗೆ ರೈಲು ನಿಲ್ದಾಣದಿಂದ ಹೊರಟಿತು. ರೈಲು ಪೂರ್ಣವಾಗಿ ಹೋಗುವ ವರಿಗೆ ಪ್ರಧಾನಿ ನೆಹರು ನಿಲ್ದಾಣದಲ್ಲಿ ಇದ್ದರು

ಬೆಂಕಿ ಆಟ

ಜಪಾನಿನ ಕಾಫಿ ಗೃಹದಲ್ಲಿ ಈಗ ಹೊಸ ಆಟ ಆರಂಭವಾಗಿದೆ ಕರುಣರು ಕಾಫಿಗೆ ಆರ್ಡರು ಮಾಡುವರು ಸಿಗರೇಟು ಹಚ್ಚಿ ಒಬ್ಬರ ಕೈಯನ್ನು ಸುಡಲಾರಂಭಿಸುವರು ನಾಳು ಎಂದವನು ಕಾಫಿ ಬಿಲ್ಲು ಕೊಡುವನು ನೋವಿನಿಂದ ಪಾರಾಗಲು ಅವರು ನಿದ್ರೆಬರುವ ಗುಳಿಗೆಗಳನ್ನು ನುಂಗುವರು

ಮಕ್ಕಳ ಅಪರಾಧ

ಕಳೆದ ವರ್ಷ ಜಪಾನಿನಲ್ಲಿ 216456 ಮಕ್ಕಳ ಅಪರಾಧಗಳು ಆಗಿವೆ

ಹಗಲುಗನಸು

ಡಿಎಂಕೆಯವರ ದ್ರಾವಿಡ ನಾಡು ಬೇಡಿಕೆ ಹಗಲುಗನಸೆಂದು ತಮಿಳು ರಾಷ್ಟ್ರೀಯ ಪಕ್ಷದ ನಾಯಕ ಶ್ರೀ ಇವಿಕೆ ಸಂಪತ್ ನಿನ್ನೆ ವಿಧಾನದಲ್ಲಿ ತಿಳಿಸಿದರು

ಪ್ರಸಾದ ಸಮರ್ಪಣೆ

ನಿನ್ನೆ ಬೆಳಿಗ್ಗೆ ಅಧ್ಯಕ್ಷ ಪ್ರಮಾಣ ವಚನವನ್ನು ಸ್ವೀಕರಿಸುವ ಮೊದಲು ದಕ್ಷಿಣ ಭಾರತದ ದೇವಾಲಯಗಳ ಪ್ರಸಾದವನ್ನು ಡಾ|| ರಾಧಾಕೃಷ್ಣನ್‌ರಿಗೆ ಮಂತ್ರಿ ಶ್ರೀ ಸಿ ಸುಬ್ರಹ್ಮಣ್ಯಂ ಇತ್ತರು

ಪ್ರಮಾಣ ವಚನ

ನವ ದೆಹಲಿಯ ಪಾರ್ಲಿಮೆಂಟು ಮಧ್ಯೆ ಹಾಲಿನಲ್ಲಿ ನಿನ್ನೆ ಬೆಳಿಗ್ಗೆ ಡಾ|| ಸರ್ವಪಲ್ಲಿ ರಾಧಾಕೃಷ್ಣನ್‌ರು ಸುಪ್ರೀಂ ಕೋರ್ಟಿನ ಶೇಷ್ಠ ನ್ಯಾಯಾಧೀಶರ ಸಮ್ಮುಖದಲ್ಲಿ ಭಾರತದ ಅಧ್ಯಕ್ಷರಾಗಿ ಪ್ರಮಾಣ ವಚನವನ್ನು ಸ್ವೀಕರಿಸಿದರು. ಆ ಸಂದರ್ಭದಲ್ಲಿ 31 ಗನ್‌ಗುಂಡುಗಳು ಹಾರಿದವು ಅಧ್ಯಕ್ಷರ ಕಾರ್ಯವನ್ನು ಸಕ್ಷಮನಿಷ್ಠೆಯಿಂದ ಮಾಡುವುದಾಗಿಯೂ, ರಾಜ್ಯಾಂಗವನ್ನು ರಕ್ಷಣೆ ಮಾಡುವುದಾಗಿಯೂ ದೇವರ ಹೆಸರಿನ ಮೇಲೆ ಅವರು ಪ್ರಮಾಣ ವಚನ ಕೈಗೊಂಡರು ಅನಂತರ ಭಾರತದ ಉಪಾಧ್ಯಕ್ಷರಾಗಿ ಡಾ|| ಜಕೀರ್ ಹುಸೇನ್‌ರು ಪ್ರಮಾಣ ವಚನ ಕೈಗೊಂಡರು ಡಾ|| ರಾಜೇಂದ್ರ ಪ್ರಸಾದರಿಗೆ ಅಧ್ಯಕ್ಷ ಡಾ|| ರಾಧಾಕೃಷ್ಣನ್‌ರವರು ಭಾರತ ರತ್ನ ಪ್ರಶಸ್ತಿಯನ್ನು ಅಲಂಕರಿಸಿದರು.

೦೦೦

ಜಂಪ್ರಗ್ರಹಕ್ಕೆ ಹೋಗುವ ರಷ್ಯದ ರಾಕೆಟ್‌ನಲ್ಲಿ ಮೊದಲು ನಾಯಿ ಪ್ರಯಾಣ ಮಾಡುವದೆಂದು ಮಾಸ್ಕೋ ವಾರ್ತೆ ತಿಳಿಸುವದು.

ಪೂರ್ವ ಬಂಗಾಳದ ಪರಿಸ್ಥಿತಿ ಬಗ್ಗೆ ಭಾರತ ಸರ್ಕಾರ ಪಾಕಿಸ್ತಾನ ಸರ್ಕಾರಕ್ಕೆ ಪ್ರತಿಭಟಿಸಿದೆ ಎಂದು ನವ ದೆಹಲಿ ವಾರ್ತೆ

ತೆರಿಗೆ ಸೇರಿ ರೂ 3 ವರೆ ಸಾವಿರ ತಿಂಗಳ ವೇತನ ಪಡೆಯುವದಾಗಿ ಅಧ್ಯಕ್ಷ ಡಾ|| ರಾಧಾಕೃಷ್ಣನ್ ನಿನ್ನೆ ತಿಳಿಸಿದರು

ವೆಸ್ಟಇಂಡೀಸ್‌ನಲ್ಲಿ 1300 ಭಾರತೀಯರು ಬಿಡುಗಡೆ ಆಯಿತೆಂದು ಲಿಸ್ಬನ್ ವಾರ್ತೆ

ಪಾಳೆಯ ಪಂಚಾಂಗ

ಅಸ್ಥಾನ ಮಹಾವಿದ್ವಾನ್ ದರ್ಶಾಧಿಕಾರಿ
ದೈವಜ್ಞ ಶಿರೋಮಣಿ
ಪಂಪಶ್ರೀ ಜೋಯಿಸರಿಂದ
15 ಏಕಾದಶಿ ಉತ್ತರ

ಸಾದರ ಸ್ವೀಕಾರ —

ದ್ವಾದಶ ಜ್ಯೋತಿರ್ಲಿಂಗ ಮಹಿಮಾ

ಬೆಂಗಳೂರಿನ ಪ್ರಸಿದ್ಧ ಧರ್ಮ ಸಂದೇಶ ಪತ್ರಿಕೆಯ ಗೌ|| ಸಂಪಾದಕರಾದ ಅಗಮಶಾಸ್ತ್ರ ಇತ್ಯಾದಿ ಶಾಸ್ತ್ರಗಳಲ್ಲಿ ಪಡೆದಿರುವ ಶ್ರೀ ತಲಕಾಡು ಅಗಮಿಕ ಕೃಷ್ಣ ದೀಕ್ಷಿತರು ರಚಿಸಿರುವ ಮತ್ತು ಧರ್ಮಸಂದೇಶ ಪೋಷಿಣಿ ಸಭೆಯಿಂದ ಪ್ರಕಟವಾಗಿರುವ 'ಶ್ರೀ ದ್ವಾದಶ ಜ್ಯೋತಿರ್ಲಿಂಗ ಮಹಿಮಾ' ಗ್ರಂಥವನ್ನು ಪಂಡನಾಪೂರ್ವಕವಾಗಿ ಸ್ವೀಕರಿಸಿದ್ದೇವೆ. ಪುಸ್ತಕದ ಬೆಲೆ ರೂ. 2

ಈ ಗ್ರಂಥದಲ್ಲಿ ದ್ವಾದಶ ಜ್ಯೋತಿರ್ಲಿಂಗಗಳ ವಿಷಯಗಳು, ಉತ್ಪತ್ತಿ, ಮಹಿಮೆ, ಸ್ಥಳಪುರಾಣ, ಕ್ಷೇತ್ರ ಮಹಿಮೆ, ಆಯಾ ಲಿಂಗಗಳ ದರ್ಶನ ಸ್ಪರ್ಶನ, ಪೂಜೆಯಿಂದ ಲಭಿಸುವ ಅನೇಕ ಫಲಗಳನ್ನು ಕರಕರಾಮಲಕವಾಗಿ ವಿವರಿಸಲಾಗಿದೆ ದ್ವಾದಶ ಜ್ಯೋತಿರ್ಲಿಂಗ ಸ್ತೋತ್ರವು ಅಡಕವಾಗಿರುವುದು ಭಕ್ತಾದಿಗಳಿಗೆ ಹೆಚ್ಚು ಪ್ರಯೋಜನವಾಗಿದೆ ಈ ಮಹಿಮಾನ್ವಿತ ಗ್ರಂಥವನ್ನು ಸರಳ ಕನ್ನಡ ಭಾಷೆಯಲ್ಲಿ, ಸುಂದರ ಶೈಲಿಯಲ್ಲಿ, ವಿಚಾರಪೂರಿತವಾಗಿ, ಜನರಲ್ಲಿ ಧರ್ಮಜಾಗೃತಿ, ದೈವಭಕ್ತಿ ಉಂಟುಮಾಡಿ, ತನ್ಮೂಲಕ ಅವರು ಸತ್ಫಲ ಪಡೆಯಲು ಅನುಕೂಲಿಸುವಂತೆ ಪ್ರಕಟಿಸಿ ಶ್ರೀ ಕೃಷ್ಣದೀಕ್ಷಿತರು ಕನ್ನಡಿಗರಿಗೆ ಮಹೋಪಕಾರ ಮಾಡಿದ್ದಾರೆಂದರೆ ಅತಿಶಯೋಕ್ತಿಯಲ್ಲ. ಈ ದ್ವಾದಶ ಲಿಂಗಗಳನ್ನು ಸಂದರ್ಶಿಸಿರುವ ಶ್ರೀ ದ್ವಾರಕಾ ಜಗದ್ಗುರು ಶಂಕರಾಚಾರ್ಯ ಶ್ರೀ ಅಭಿನವ ಸಚ್ಚಿದಾನಂದ ತೀರ್ಥ ಮಹಾಸ್ವಾಮಿಗಳವರಿಗೆ ಈ ಗ್ರಂಥವನ್ನು ಸಮರ್ಪಿಸಿರುವುದು ಯುಕ್ತವಾಗಿದೆ.

★

ಹಾವನ ಪೌರಸಭೆ ಗುರುವಾರ ಶ್ರೀ ಶೃಂಗೇರಿ ಜಗದ್ಗುರುಗಳವರಿಗೆ ಸನ್ಮಾನ ಪತ್ರ ಅರ್ಪಿಸಿತು. ಸನ್ಯಾಸಿಗಳಿಗೆ ಪೌರಸಭೆ ಸನ್ಮಾನ ಪತ್ರವನ್ನು ಅರ್ಪಿಸಿರುವುದು ಇದೇ ಪ್ರಥಮ.

oooo

ಆರೆಂಜುಸ್ಟ್ರೀಟ್ ಕಾಲೇಜಿನ ಹತ್ತಿರ ಸತ್ತು ಸಾವಿರ ಪ್ರೇಕ್ಷಕರ ಮುಂದೆ ಆನೆ ಜೂಜು ನಡೆಯಿತು. ಹದಿನೈದು ಆನೆಗಳು ಭಾಗವಹಿಸಿದ್ದವು. ಸೊನ್ನೇತ ಎಂಬ ಆನೆ ಪ್ರಥಮಸ್ಥಾನಗಳಿಸಿ ಬಹುಮಾನ ಪಡೆಯಿತು.

oooo

ಇಂಡಿಪೆಂಡೆಂಟ್ ಮಾಸ ಪತ್ರಿಕೆಯು ಸಂಪಾದಕರು ಮತ್ತು ಪ್ರಕಾಶಕರಾಗಿ ಮೈಸೂರು ಆಲ್ ಜಿ|| ಮ್ಯಾಬಿಸ್ಟ್ರೇಟ್ ಮುಂದೆ ಶ್ರೀ ಹೆಚ್ ಎಸ್. ನಾಸಿಂಹ ಮೂರ್ತಿಯವರು ಡಿಕ್ಲೇರ್ ಮಾಡಿಕೊಂಡರು.

oooo

ವಿಧಾನಸಭೆ ಸಡವಳಿಕೆಗೆ ವಿರುದ್ಧವಾಗಿ ಕಾಲ ಹೆಚ್ಚಿಸಿದ್ದನ್ನು ಪ್ರತಿಭಟಿಸಿ ಮೊನ್ನೆ ವಿರೋಧಪಕ್ಷ ಸಭಾಪರಿತ್ಯಾಗ ಮಾಡಿರುವುದಾಗಿ ಲಕ್ನೋ ವಾರ್ತೆ ತಿಳಿಸುತ್ತದೆ.

oooo

ಪಾಕಿಸ್ತಾನಕ್ಕೆ ಕಬ್ಬಿಣ ಮತ್ತು ಉಕ್ಕಿನ ಪದಾರ್ಥಕೊಳ್ಳಲು ಬಿಡ್ಡಿಯಿಲ್ಲದ 645 ವಿಲಿಯ ಡಾಲರುಗಳನ್ನು ಅಮೆರಿಕಾ ಸಾಲವಿತ್ತಿದೆ ಎಂದು ಲಂಡನ್ ವಾರ್ತೆ.

SHAKTI SUDHA

A Superb Tonic

ವುಡ್‌ಲ್ಯಾಂಡ್ ಆನಂದದ 14 ನೇ ವಾರ

ಜಂಗ್ಲಿ (ಹಿಂದಿ) Junglee

ನಟವರ್ಗ— ಶಮ್ಮಿ ಕಪೂರ್, ಸೈರಾ ಬಾನು, ಲಲಿತಾ ಪವಾರ್, ಹೆಲೆನ್

ಸಂಗೀತ— ಶಂಕರ್-ಜೈಕಿಶನ್ [ದಿನವಹಿ 3 ಪ್ರದರ್ಶನಗಳು]

ಆಪೆರಾ— ಯಶಸ್ವಿ 4 ನೇ ವಾರ

ಸಂಪೂರ್ಣ ರಾಮಾಯಣ

- ಕನ್ನಡ -

[ಪೂರ್ಣ ವರ್ಣರಂಜಿತ ಚಿತ್ರ] [ದಿನವಹಿ 3 ಆಟಗಳು]

For Quality Printing — ಎಲ್ಲ ವಿಧದ ಆಯುರ್ವೇದ ಔಷಧಗಳಿಗೆ

L. N. Press — ಅಶೋಕಾ ಫಾರ್ಮಸಿ

Sivarampet, Mysore — ಲ್ಯಾನ್ಸ್‌ಡೌನ್ ಬಜಾರ್ ಮೈಸೂರು



ಅವೇರಿಕ— ಎಬ್ರಹಂ ಲಿಂಕನ್ನರ ಸಂಬಂಧಿಸಿದ ಚಿತ್ರಗಳು

Edited, Printed & Published by the Proprietor, Dharma Prachara Nirata M. S. Krishna Rao at the Satyavadi Press Chamarajapuram, Mysore 4.